# ಪ್ರಿಂಟ್ಸ್ ಉಡುಪುಗಳತ್ತ ಯುವತಿಯರ ಚಿತ್ತ



ಇಂದಿನ ಯುವತಿಯರು ಪ್ರಿಂಟ್ಸ್ ಉಡುಪುಗಳತ್ತ ಚಿತ್ತ ಹರಿಸಿದ್ದಾರೆ. ಕಾರಣ ಚೆಂದದ ಬಟ್ಟೆಗಳಲ್ಲಿನ ಆಕರ್ಷಣೀಯ ಪ್ರಿಂಟ್ಸ್ ಮತ್ತು ಬಣ್ಣ.

■ ಶೀಲಾ ನಟರಾಜ್

ಫ್ಯಾಷನ್ ದಿನೇ ದಿನೇ ಬದಲಾಗುತ್ತಲೇ ಇರುತ್ತದೆ. ಅದರಲ್ಲೂ ಫ್ಯಾಬ್ರಿಕ್ ಬಣ್ಣಗಳಲ್ಲಿ, ಪ್ರಿಂಟ್ಸ್‌ನಲ್ಲಿ ಹೊಸ ವಿನ್ಯಾಸಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಯುವ ಜನತೆಯ ಮನ ಸೂರೆ ಗೊಂಡಿರುವ ಪೋಲ್ಕಾ ಡಾಟ್ಸ್ ಡಿಸೈನ್ ಮತ್ತು ಗಾರ್ಡನ್ ಪ್ರಿಂಟ್ಸ್ ಬಣ್ಣದ ಬಟ್ಟೆಗಳ ಲೋಕದಲ್ಲಿ ಹೊಸ ಜಾದು ಪ್ರಾರಂಭಿಸಿ ಬಿಟ್ಟಿದೆ. ಬಟ್ಟೆಗಳನ್ನು ಆಯ್ದು ಹೊಸ ವಿನ್ಯಾಸ ರೂಪಿಸುವಲ್ಲಿ ಅನೇಕ ಕಂಪೆನಿಗಳು ಪೈಪೋಟಿ ನಡೆಸುತ್ತಿವೆ. ಇಂದಿನ ಯುವತಿಯರು ಪ್ರಿಂಟ್ಸ್ ಉಡುಪುಗಳತ್ತ ಚಿತ್ತ ಹರಿಸಿದ್ದಾರೆ. ಕಾರಣ ಚೆಂದದ ಬಟ್ಟೆಗಳಲ್ಲಿನ ಆಕರ್ಷಣೀಯ ಪ್ರಿಂಟ್ಸ್ ಮತ್ತು ಬಣ್ಣ.

## ಪೋಲ್ಕಾ ಡಿಸೈನ್

ನೋಡಿದ ತಕ್ಷಣ ಬಬಲ್‌ನಂತೆ ಕಾಣುವ ಡಾಟ್ಸ್, ಚುಕ್ಕಿಚಂದ್ರಮನಂತೆ ಮಿನುಗುವ ಡಾಟ್ಸ್, ಮೂನ್ ಡಾಟ್ಸ್, ರಂಗೋಲಿಗಾಗಿ ಬಿಡಿಸಿದ ಚುಕ್ಕಿಗಳಂತೆ ಗೋಚರಿಸುವ ಡಾಟ್ಸ್. ಇನ್ನೂ ಪುಟ್ಟ ಶೈನಿಂಗ್ ಡಾಟ್ಸ್ ಇವೆಲ್ಲ ಪೋಲ್ಕಾ ಡಿಸೈನ್‌ನ ಸ್ಯಾಂಪಲ್‌ಗಳು. ಎಂಬತ್ತರ ದಶಕದಲ್ಲಿ ಡಾಟ್ಸ್ ಪ್ರಿಂಟ್ಸ್‌ಗೆ ಹೆಚ್ಚು ಹೆಸರು ಮಾಡಿದ್ದ ಪೋಲ್ಕಾ ಡಾಟ್ಸ್ ಫ್ಯಾಷನ್ ಈಗ ಮತ್ತಷ್ಟು ಕಲರ್‌ಫುಲ್ ಆಗಿ ವಿಭಿನ್ನ ವಿನ್ಯಾಸಗಳಲ್ಲಿ ಫ್ಯಾಷನ್ ಜಗತ್ತನ್ನು ಪ್ರವೇಶಿಸಿದೆ. ಸೀರೆ, ಸಲ್ವಾರ್, ಫ್ರಾಕ್ಸ್, ಗೌನ್, ಸ್ಕರ್ಟ್‌ಗಳಲ್ಲಿಯೂ ಈಗ ಪೋಲ್ಕಾ ಡಿಸೈನ್ ಕಾಣಬಹುದು.

ಡಬ್ಬಲ್ ಶೇಡೆಡ್, ಕಾಂಟ್ರಾಸ್ಟ್, ಅಪೋಸಿಟ್ ಕಲರ್ಸ್ ಡಾಟ್ಸ್‌ನಲ್ಲಿ ಪೋಲ್ಕಾ ಡಿಸೈನ್ ಟಿಪಿಕಲ್ ಲುಕ್‌ನಲ್ಲಿ ಫಾರ್ಮಲ್ ಮತ್ತು ವೆಸ್ಟರ್ನ್ ಲುಕ್ ನೀಡಿದೆ. ಹಿಂದೆ ಪೋಲ್ಕಾ ಡಿಸೈನ್ ಎಂದರೆ ಬಿಳಿಯ ಬಟ್ಟೆಯ ಮೇಲೆ ಕಪ್ಪು ಚುಕ್ಕಿ ಅಥವಾ ಬೇರೆ ಬಣ್ಣದ ಚುಕ್ಕಿ ಎಂದೇ ಬಿಂಬಿಸಲಾಗುತ್ತಿತ್ತು. ಈಗ ಹಾಗಿಲ್ಲ. ಭಿನ್ನ ಬಣ್ಣದ ಬಟ್ಟೆಯ ಮೇಲೆ ಭಿನ್ನ ಬಣ್ಣದ ಡಾಟ್ಸ್ ಬಂದಿದೆ. ಶೈನಿಂಗ್ ಡಾಟ್ಸ್ ಅಂತೂ ಬಟ್ಟೆಗಳಿಂದ ಎದ್ದು ಹೊರ ಬರುವುದೇನೋ ಎಂಬಂತೆ ಕಾಣುತ್ತದೆ.

ಶೈನಿಂಗ್ ಬಟ್ಟೆಗಳ ಪೋಲ್ಕಾ ಡಿಸೈನ್ ರೇಷ್ಮೆ, ಕ್ರೇಪ್, ಸಿಲ್ವರ್, ಬ್ಲ್ಯಾಕ್ ಗೋಲ್ಡ್, ಶೈನಿ ಗೋಲ್ಡ್ ಇನ್ನೂ ಅನೇಕ ಕಣ್ಣುಕುಕ್ಕುವ ಜಗಮಗಿಸುವ ಬಟ್ಟೆಗಳ ಮೇಲೆ ಥ್ರೀಡಿ ಎಫೆಕ್ಟ್‌ನಲ್ಲಿ ಪೋಲ್ಕಾ ಡಾಟ್ಸ್ ಡಿಸೈನ್ ಮಾಡಲಾಗಿದೆ. ಫ್ಯಾಷನ್ ಷೋ ಹಾಗೂ ಸಿನಿಮಾ ಮಂದಿಯ ಆಪ್ತ ಉಡುಗೆಗಳಲ್ಲಿ ಪೋಲ್ಕಾ ಡಿಸೈನ್‌ನ ಉಡುಪು ಕಂಡು ಬರುತ್ತಿರುವುದು ಉತ್ತಮ ಬೆಳವಣಿಗೆ.

## ಮಿಕ್ಸ್ ಅಂಡ್ ಮ್ಯಾಚ್

ಡಬ್ಬಲ್ ಕಲರ್ ಬಟ್ಟೆಗಳ ಮಿಕ್ಸ್, ಮ್ಯಾಚ್ ಪೋಲ್ಕಾ ಡಿಸೈನ್‌ನಲ್ಲಿ ತುಂಬ ಚೆನ್ನಾಗಿ ಕಾಣುತ್ತದೆ. ಪೋಲ್ಕಾ ಡಿಸೈನ್ ಬಟ್ಟೆಯಿಂದ ಸಿದ್ಧಪಡಿಸಿದ ಕುರ್ತಾ, ಟಾಪ್ಸ್, ಸೀರೆ, ಗೌನ್‌ಗಳನ್ನು ಶೈನಿಂಗ್ ಡಾಟ್ಸ್‌ನಲ್ಲಿ ಇರುವುದನ್ನೇ ಖರೀದಿಸಿ. ಡಾಟ್ಸ್‌ಗಳ ಪ್ರಿಂಟ್ ಅನ್ನು ಸೂಕ್ಷ್ಮವಾಗಿ ಗಮನಿಸಿ. ಈ ಡಾಟ್ಸ್‌ಗಳು ಸುಲಭವಾಗಿ ಕಿತ್ತು ಬರುವುದಿಲ್ಲ ಮತ್ತು ಬಣ್ಣ ಸಹ ಬಿಡುವುದಿಲ್ಲ. ಕಪ್ಪು, ಬಿಳಿ ಪೋಲ್ಕಾ ಡಿಸೈನ್ ಟ್ರೆಂಡ್ ಆಗಿದ್ದರೂ ನೀವು ಕೆಂಪು ಮತ್ತು ನೀಲಿ ಬಣ್ಣಗಳ ಪ್ರಿಂಟ್ ಕೂಡ ಪಾರ್ಟಿವೇರ್ ಆಗಿ ಆಯ್ಕೆ ಮಾಡಿ ಕೊಳ್ಳಬಹುದು.



## ಗಾರ್ಡನ್ ಪ್ರಿಂಟ್ಸ್

ದೊಡ್ಡ ಹೂಗಳ ಪ್ರಿಂಟ್ ಇರುವ ಬಟ್ಟೆಗಳು ಅಥವಾ ಸೀರೆ ಹಿಂದೆ ಹೆಚ್ಚಾಗಿ ಪ್ರಚಲಿತದಲ್ಲಿತ್ತು. ಜಾರ್ಜೆಟ್ ಮತ್ತು ಶಿಫಾನ್ ಸೀರೆಗಳು ಹೆಚ್ಚು ಪ್ರಸಿದ್ಧವಾಗಿದ್ದರೂ ಯುವ ಜನತೆಯನ್ನು ತಮ್ಮತ್ತ ಸೆಳೆಯುವಲ್ಲಿ ವಿಫಲಾಗಿದ್ದವು. ಆದರೆ ಈಗ ಗಾರ್ಡನ್ ಪ್ರಿಂಟ್ ಫ್ಯಾಬ್ರಿಕ್ ಹೆಚ್ಚು ಜನಪ್ರಿಯವಾಗಿವೆ. ಹೂ, ಬಳ್ಳಿ, ಗಿಡ, ಮರ, ಗುಲಾಬಿ, ಲಿಲ್ಲಿ, ಕಮಲ, ಸೂರ್ಯಕಾಂತಿ, ಸೇವಂತಿ.. ಅಬ್ಬಬ್ಬಾ ಒಂದೇ..? ಎರಡೇ..? ನೂರಾರು ಬಗೆಯ ಗಾರ್ಡನ್ ಪ್ರಿಂಟ್ಸ್‌ವುಳ್ಳ ಬಟ್ಟೆಗಳು ಟ್ರೆಂಡಿಯಾಗಿವೆ. ಬೇಸಿಗೆಯಲ್ಲಿ ಹೆಚ್ಚು ಆಪ್ತತೆಯನ್ನು ಕೊಡುವ ಈ ಬಟ್ಟೆಗಳು ನೋಡಲಿಕ್ಕೂ ತಂಪು ಉಂಟು ಮಾಡುತ್ತವೆ. ಫ್ಯಾಷನ್ ಗೌನ್ಸ್, ಸಲ್ವಾರ್, ಸ್ಕರ್ಟ್, ಕುರ್ತಾ, ಫ್ರಾಕ್ಸ್, ಸೀರೆಗಳಲ್ಲಿ ಈ ಗಾರ್ಡನ್ ಪ್ರಿಂಟ್ಸ್ ಕಾಣಬಹುದು.

## ಫ್ಲೋರಲ್, ಟ್ರಾಪಿಕಲ್ ಪ್ರಿಂಟ್ಸ್

ಗಾಢಬಣ್ಣಗಳಲ್ಲಿ ಹೂ, ಬಳ್ಳಿಯ ಚಿತ್ರಗಳುಳ್ಳ ಫ್ಲೋರಲ್ ಪ್ರಿಂಟ್ಸ್ ನೋಡಲು ಆಪ್ತವೆನಿಸುತ್ತದೆ. ಕಾಟನ್ ಮತ್ತು ಶಿಫಾನ್ ಬಟ್ಟೆಗಳ ಮೇಲೆ ಪ್ರಿಂಟ್ಸ್ ಹಾಕಲಾಗಿದ್ದು ಗೌನ್ ಮತ್ತು ಸೀರೆಗಳ ಮೇಲೆ ಚಿತ್ತಾರ ಚೆಂದವಾಗಿ ಕಾಣುತ್ತದೆ.

## ಟ್ರಾಪಿಕಲ್ ಪ್ರಿಂಟ್ಸ್

ಟ್ರಾಪಿಕಲ್ ಪ್ರಿಂಟ್ಸ್ ಇರುವ ಬಟ್ಟೆ ಧರಿಸಿದರೆ ಎಷ್ಟು ದಪ್ಪವಿದ್ದವರೂ ಸಣ್ಣಗೆ ಕಾಣುತ್ತಾರೆ. ಚೂಡಿದಾರ್, ಟಾಪ್ಸ್ ಮತ್ತು ಕುರ್ತಾಗಳನ್ನು ಎಲ್ಲರೂ ಮೆಚ್ಚಿಕೊಳ್ಳುತ್ತಿದ್ದಾರೆ. ಹೊಸ ಡಿಸೈನರ್ ಸ್ಕಾರಿ ಮತ್ತು ಪುರುಷರಿಗಾಗಿ ಶರ್ಟ್ಸ್ ಕೂಡ ಟ್ರಾಪಿಕಲ್ ಪ್ರಿಂಟ್ಸ್‌ನಲ್ಲಿ ಲಭ್ಯ.

## ಸಿಲ್ಕಿ ಗಾರ್ಡನ್ ಪ್ರಿಂಟ್ಸ್

ನೀಲಿ, ಹಸಿರು, ಬಿಳಿ, ಸಿಲ್ವರ್, ಕೆಂಪು ರಂಗಿನ ಬಟ್ಟೆಗಳ ಮೇಲೆ ಗಾರ್ಡನ್ ಪ್ರಿಂಟ್ ಕಣ್ಣು ಕೋರೈಸುವಂತೆ ಮಾಡುತ್ತದೆ. ಪಾರ್ಟಿವೇರ್ ಮತ್ತು ಫೋಟೊ ಶೂಟ್‌ಗಾಗಿ ಈ ಫ್ಯಾಬ್ರಿಕ್ ಬಟ್ಟೆ ಧರಿಸಬಹುದು. ಮಳೆಗಾಲಕ್ಕೆ ಈ ಬಟ್ಟೆ ಸೂಕ್ತ. ■